

# ‘ಮುಧೋಳ’ದಲ್ಲಿ ಸಂಜನಾ-ವಿಕ್ರಮ್ ಕೆಮಿಸ್ಟ್ರಿ

‘ಕೆಮಿಸ್ಟ್ರಿ ಆಫ್ ಕರಿಯಪ್ಪ’ ಸಿನಿಮಾದ ಮೂಲಕ ಚಂದನವನಕ್ಕೆ ಕಾಲಿಟ್ಟಿದ್ದ ನಟಿ ಸಂಜನಾ ಆನಂದ್, ಕ್ರೇಜಿಸ್ಟಾರ್ ಪುತ್ರ ವಿಕ್ರಮ್‌ಗೆ ಜೋಡಿಯಾಗಿದ್ದಾರೆ. ವಿಕ್ರಮ್ ನಟನೆಯ ‘ಮುಧೋಳ’ ಸಿನಿಮಾದಲ್ಲಿ ನಾಯಕಿಯಾಗಿ ಬಣ್ಣ ಹಚ್ಚಲಿದ್ದಾರೆ.

ಕನ್ನಡ ಸಿನಿಮಾರಂಗ ಸೇರಿದಂತೆ ತೆಲುಗು ಚಿತ್ರರಂಗದಲ್ಲೂ ಸಂಜನಾ ಸಕ್ರಿಯರು. ದಿನಕರ್ ತೂಗುದೀಪ ನಿರ್ದೇಶನದ ‘ರಾಯಲ್’ ಹಾಗೂ ತೆಲುಗಿನ ‘ಫುಲ್ ಬಾಟಲ್’ ಎಂಬ ಚಿತ್ರಗಳ ಬಿಡುಗಡೆ ಕೂಡ ಸದ್ಯ ಅವರ ಲಿಸ್ಟ್‌ನಲ್ಲಿದೆ. ಧನ್ವೀರ್ ನಟನೆಯ ‘ಹಯಗ್ರೀವ’ ಸಿನಿಮಾ ಅವರ ಕೈಯಲ್ಲಿದೆ. ಸಿನಿಮಾದೊಂದಿಗೆ, ಇಂದ್ರಜಿತ್ ಲಂಕೇಶ್ ನಿರ್ದೇಶನದ ‘ಗೌರಿ’ ಸಿನಿಮಾದಲ್ಲಿ ಹಾಡೊಂದಕ್ಕೂ ನೃತ್ಯ ಮಾಡಿದ್ದಾರೆ ಸಂಜನಾ.

ಇದೀಗ ವಿಕ್ರಮ್ ನಟನೆಯ ‘ಮುಧೋಳ’ದಲ್ಲಿ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ‘ತ್ರಿವಿಕ್ರಮ್’ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ವಿಕ್ರಮ್ ಅವರ ಎರಡನೇ ಪ್ರಾಜೆಕ್ಟ್ ‘ಮುಧೋಳ’. ತಮಿಳು, ತೆಲುಗು ಚಿತ್ರರಂಗದಲ್ಲಿ ಸಹ ನಿರ್ದೇಶಕನಾಗಿ, ಸಿನಿಮಾ ಬರಹಗಾರನಾಗಿ ಗುರುತಿಸಿಕೊಂಡಿರುವ ಕಾರ್ತಿಕ್ ರಾಜನ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ■



# ‘ಸಿದ್ಲಿಂಗು’ ಹೊಸ ಇನಿಂಗ್ಸ್

ಹೊಸ ರೀತಿಯ ನಿರೂಪಣೆಯಿಂದ ಅಭಿಮಾನಿಗಳ ಮನ್ನಣೆ ಪಡೆದಿದ್ದ, ಲೂಸ್ ಮಾದ ಯೋಗಿ, ನಟಿ ರಮ್ಯಾ ಜೋಡಿಯಾಗಿ ನಟಿಸಿದ್ದ ‘ಸಿದ್ಲಿಂಗು’ ಸಿನಿಮಾ ತೆರೆಕಂಡು ಬರೋಬ್ಬರಿ 12 ವರ್ಷಗಳು ಸಂದಿವೆ. ಇಷ್ಟು ವರ್ಷಗಳ ನಂತರ ಅದೇ ಹೆಸರಿನಲ್ಲಿ ಮತ್ತೊಂದು ಸಿನಿಮಾ ಮೂಡಿಬರುತ್ತಿದ್ದು, ಅದರಲ್ಲಿ ಯೋಗಿ ಮತ್ತೆ ‘ಸಿದ್ಲಿಂಗು’ ಆಗಲು ಹೊರಟಿದ್ದಾರೆ.

‘ತೋತಾಪುರಿ’ ಬಳಿಕ ನಿರ್ದೇಶಕ ವಿಜಯ್ ಪ್ರಸಾದ್ ‘ಸಿದ್ಲಿಂಗು’ ಸೀಕ್ವೆಲ್ ಕಥೆಯನ್ನು ಕೈಗೆತ್ತಿಕೊಂಡಿದ್ದು, ಸಿನಿಮಾಗೆ ‘ಸಿದ್ಲಿಂಗು–2’ ಎಂದು ಹೆಸರಿಟ್ಟಿದ್ದಾರೆ.

‘ಸಿದ್ಲಿಂಗು ಹಾಸ್ಯ, ಸಂಬಂಧಗಳು, ಪ್ರೀತಿ, ತುಂಟತನ, ಭಾವನೆಗಳಿಂದ ಜನರ ಮೆಚ್ಚುಗೆ ಗಳಿಸಿತ್ತು. ಈ ಸಿನಿಮಾ ಕೂಡ ಆ ಜನಪ್ರಿಯತೆಯನ್ನು ಬಹಳ ಜವಾಬ್ದಾರಿಯುತವಾಗಿ ಕೊಂಡೊಯ್ಯಲಿದೆ’ ಎಂದು ವಿಜಯ್ ಪ್ರಸಾದ್ ಹೇಳಿದ್ದಾರೆ.

ಈ ಚಿತ್ರದಲ್ಲಿ ರಮ್ಯಾ ಜಾಗಕ್ಕೆ ನಟಿ ಸೋನುಗೌಡ ಬಂದಿದ್ದಾರೆ. ಮೊದಲ ಭಾಗದಲ್ಲಿ ಜನಪ್ರಿಯವಾಗಿದ್ದ, ಸುಮನ್ ರಂಗನಾಥ್ ನಿರ್ವಹಿಸಿದ್ದ ಆಂಡಾಳಮ್ಮನ ಪಾತ್ರ ಕೂಡ ಇರಲಿದೆ ಎಂದು ಚಿತ್ರತಂಡ ಹೇಳಿದೆ.

ಅನೂಪ್ ಸೀಳಿನ್ ಸಂಗೀತ, ಅರಸು ಅಂತಾರೆ ಸಾಹಿತ್ಯ ಚಿತ್ರಕ್ಕಿರಲಿದ್ದು, ಪದ್ಮಜಾ ರಾವ್, ಆಂಟೋನಿ ಕಮಲ್, ಮಹಾಂತೇಶ್ ಸೇರಿದಂತೆ ದೊಡ್ಡ ತಾರಾಗಣವಿದೆ. ‘ಜಮಾಲಿಗುಡ್ಡ’ ಚಿತ್ರದ ನಿರ್ಮಾಪಕ ಶ್ರೀಹರಿ ರೆಡ್ಡಿ ನಿಹಾರಿಕಾ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಇದೇ ತಿಂಗಳಿನಿಂದ ಚಿತ್ರೀಕರಣ ಶುರುವಾಗಲಿದ್ದು, ಬೆಂಗಳೂರು ಹಾಗೂ ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ನಡೆಸಲು ತಂಡ ನಿರ್ಧರಿಸಿದೆ. ■